ಬೆಂಗಳೂರು ನಗರ ವಿಶ್ವವಿದ್ಯಾಲಯ
ನಗರ ವಿಶ್ವವಿದ್ಯಾಲಯ
BENGALURU
CITY UNIVERSITY
ಆಗು ನೀ ಅನಿಕೇತನ
BE BOUNDLESS

# ಬೆಂಗಳೂರು ನಗರ ವಿಶ್ವವಿದ್ಯಾಲಯ

# ಸೆಂಟ್ರಲ್ ಕಾಲೇಜು ಆವರಣ, ಬೆಂಗಳೂರು

**ಮೂರನೇ ಸೆಮಿಸ್ಟರ್**

**ಕನ್ನಡ ಭಾಷೆ ಮತ್ತು ಐಚ್ಛಿಕ ಕನ್ನಡ**

**(ಎಸ್.ಇ.ಪಿ. ಮಾದರಿ–2024ರ ಮಾರ್ಗಸೂಚಿಯಂತೆ)**

**2025–26ನೇ ಸಾಲಿನಿಂದ**

PROCEEDINGS OF THE MEETING OF THE BOARD OF STUDIES IN THE KANNADA (UG), BENGALURU CITY UNIVERSITY HELD ON 20.03.2025 at 11.00 AM IN THE BCUSMS, CENTRAL COLLEGE CAMPUS, BENGALURU – 560 001.

***Members Present***:

| | | |
|---|---|---|
| 1. | ಡಾ. ಶಶಿಕಲಾ ಹೆಚ್,<br>ಪ್ರಾಧ್ಯಾಪಕರು, ಕನ್ನಡ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ,<br>ಬೆಂಗಳೂರು–560056 | ಅಧ್ಯಕ್ಷರು |
| 2. | ಡಾ. ಎಸ್. ಮನೋನ್ಮನಿ<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಬಿಷಪ್ ಕಾಟನ್ ಮಹಿಳಾ ಮಹಾವಿದ್ಯಾಲಯ<br>ನಂ.19, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು–560027 | ಸದಸ್ಯರು |
| 3. | ಡಾ.ಸುವರ್ಣ ಸಂಗಣ್ಣ ಹುಡೇದ<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಹೆಚ್.ಕೆ.ಇ.ಎಸ್. ವೀರೇಂದ್ರಪಾಟೀಲ್ ಪದವಿ ಮಹಾವಿದ್ಯಾಲಯ<br>ನಂ.15ನೇ ಮುಖ್ಯ ರಸ್ತೆ, ರಾಜಮಹಾಲ್ ವಿಲಾಸ್ ಬಡಾವಣೆ, ಸದಾಶಿವನಗರ,<br>ಬೆಂಗಳೂರು–560080 | ಸದಸ್ಯರು |
| 4. | ಡಾ.ಬೊಮ್ಮೇಗೌಡ<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,<br>ವಿ.ವಿ.ಪುರಂ ಕಲೆ ಮತ್ತು ವಾಣಿಜ್ಯ ಕಾಲೇಜು, ಕೆ.ಆರ್. ರಸ್ತೆ,<br>ಬೆಂಗಳೂರು–560004 | ಸದಸ್ಯರು |
| 5. | ಡಾ.ಎಸ್.ಎಲ್. ಮಂಜುನಾಥ್<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ವಿಜಯ ಕಾಲೇಜು, ಜಯನಗರ, ಬೆಂಗಳೂರು–560011 | ಸದಸ್ಯರು |
| 6. | ಡಾ. ಸುರೇಶ ಕೆ. ಸಿ.<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಕೆ.ಎಲ್.ಇ. ಸಂಸ್ಥೆಯ ಎಸ್. ನಿಂಜಲಿಂಗಪ್ಪ ಮಹಾವಿದ್ಯಾಲಯ,<br>ರಾಜಾಜಿನಗರ, ಬೆಂಗಳೂರು–560010 | ಸದಸ್ಯರು |
| 7. | ಡಾ.ಬಿ.ಎನ್.ಪೂರ್ಣಿಮಾ<br>ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಸೇಂಟ್ ಜೋಸೆಫ್ ವಿಶ್ವವಿದ್ಯಾಲಯ, ಶಾಂತಿ ನಗರ, ಬೆಂಗಳೂರು | ಸದಸ್ಯರು |
| 8. | ಡಾ. ಬೆಟ್ಟೆಗೌಡ ಪಿ, ಪ್ರಾಧ್ಯಾಪಕರು<br>ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುವೆಂಪು ನಗರ, ಮೈಸೂರು–570023 | ಸದಸ್ಯರು |

***Members Absent***:

| | | |
|---|---|---|
| 1. | ಡಾ. ಶೀಲವಂತ ಸಂಜೀವ್‌ಕುಮಾರ್<br>ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ<br>ಎಸ್‌ಜೆಆರ್‌ಸಿ ವಿಜ್ಞಾನ, ಕಲಾ, ಮತ್ತು ವಿಜ್ಞಾನ ಮಹಾವಿದ್ಯಾಲಯ,<br>ಬೆಂಗಳೂರು–560009 | ಸದಸ್ಯರು |
| 2. | ಡಾ. ಎನ್. ಆರ್. ಚಂದ್ರಗೌಡ<br>ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ<br>ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು | ಸದಸ್ಯರು |

ದಿನಾಂಕ 20.03.2025 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸ್ನಾತಕ ಅಧ್ಯಯನ ಮಂಡಳಿಯ ಸಭೆ ಸೇರಿ, III ಮತ್ತು IVನೇ ಸೆಮಿಸ್ಟರ್‌ಗೆ ಸಂಬಂಧಿಸಿದಂತೆ ಪಠ್ಯಗಳ ಚರ್ಚೆ ನಡೆಸಲಾಯಿತು.

ಸಭೆಯಲ್ಲಿ III ಮತ್ತು IVನೇ ಸೆಮಿಸ್ಟರ್ ಪಠ್ಯಗಳನ್ನು ಸಿದ್ಧಪಡಿಸುವ ಮಾದರಿಯನ್ನು ಚರ್ಚಿಸಲಾಯಿತು. ಉಪಸಮಿತಿಗಳ ಸಂಪಾದಕರನ್ನು ಆಯ್ಕೆ ಮಾಡುವಾಗ ಜೇಷ್ಠತಾ ಪಟ್ಟಿಯನ್ನು ಅನುಸರಿಸಿ ಪಠ್ಯಗಳ ಆಯ್ಕೆ ನೀಡಲು ಸೂಚಿಸಲಾಯಿತು.

ಮೇ ತಿಂಗಳ ಮೊದಲನೇ ವಾರದಲ್ಲಿ ಆಯ್ಕೆ ಮಾಡಿದ ಪಠ್ಯಗಳನ್ನು ಸಲ್ಲಿಸಲು ಸೂಚಿಸಲಾಯಿತು.

2. ಶಿಕ್ಷಕರ ಪಟ್ಟಿಯಲ್ಲಿ ಕೆಲವು ಪ್ರಾಧ್ಯಾಪಕರು / ಸಹ ಪ್ರಾಧ್ಯಾಪಕರನ್ನು ನಿವೃತ್ತರಾಗಿರುವ ಕಾರಣದಿಂದ, ಪಟ್ಟಿಯನ್ನು ಪರಿಷ್ಕರಿಸಿ ಅನುಮೋದಿಸಲಾಗಿದೆ.

| | | |
|---|---|---|
| Member | Member | Member |
| Member | Member | Member |
| Member | Member | Chairperson |

# ಪದವಿ ಶಿಕ್ಷಣದಲ್ಲಿ ಕನ್ನಡ ಭಾಷಾ ಬೋಧನೆಯ ಸ್ವರೂಪ

ಪದವಿ ಶಿಕ್ಷಣದಲ್ಲಿ ಕನ್ನಡ ಭಾಷಾ ಕಲಿಕೆಯು, ಕನ್ನಡ ಭಾಷೆಯ ಪರಂಪರೆಯಲ್ಲಿ ಅರಳಿದ ಸಾಹಿತ್ಯವನ್ನು ಕಲಿಸುವುದಾಗಿರುತ್ತದೆ. ಕಾಲದಲ್ಲಿ ಸಾಗಿ ಬರುತ್ತಿರುವ ಕನ್ನಡ ಭಾಷೆಯು ತನ್ನೊಡನೆ ಸಾಗಿಸಿಕೊಂಡು ಬರುತ್ತಿರುವ ಸಾಹಿತ್ಯದ ವಿಭಿನ್ನ ಸ್ವರೂಪವು ಬೇರೆ ಬೇರೆ ಪ್ರಕಾರಗಳಾಗಿ ಒಡಮೂಡುತ್ತಿರುವುದರ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿಕೊಡುವ ಉದ್ದೇಶವೂ ಇದರಲ್ಲಿದೆ. ಬದಲಾಗುತ್ತಿರುವ ಸಮಾಜವು ತನ್ನ ಜನತೆಯ ಬದುಕಿನ ಚಿಂತನೆಯನ್ನು ಭಾಷೆಯ ಮೂಲಕ, ಸಾಹಿತ್ಯದ ಮೂಲಕ ಸಾಗಿಸುತ್ತಾ, ಅದನ್ನು ಒಂದು ಸಮಾಜದ ಸಂಸ್ಕೃತಿ ಚಿಂತನೆಯನ್ನಾಗಿಸುವುದನ್ನು ವಿದ್ಯಾರ್ಥಿಗಳಿಗೆ ಕಲಿಸುವ ಉದ್ದೇಶವೂ ಇದರಲ್ಲಿದೆ.

ಇದಕ್ಕಾಗಿ ಕನ್ನಡ ಭಾಷೆಯನ್ನು ಸೃಜನಶೀಲತೆಯ ನೆಲೆಯಲ್ಲಿ ಅರಿಯುವ ಬಗೆಯು ಭಾಗ–1ರಲ್ಲಿ ಒಂದು ಕ್ರಮದಲ್ಲಿದೆ. ಭಾಗ–2ರ ಕೌಶಲ್ಯದಲ್ಲಿ, ವಿದ್ಯಾರ್ಥಿಗಳು ತರಗತಿಯಲ್ಲಿ ಭಾಷೆಯನ್ನು ಮಾತಿನ ಮೂಲಕ, ಬರಹದಲ್ಲಿ ಬಳಸುವ ಮೂಲಕ ಮತ್ತು ಇತರ ಅಭಿವ್ಯಕ್ತಿಗಳ ಮೂಲಕ ತಮ್ಮ ಮನಸ್ಸಿನ ಆಲೋಚನೆಗಳನ್ನು ಹೊರಹಾಕುವ ಬಗೆಗಳನ್ನು ಹುಡುಕಿ, ತರಗತಿಯಲ್ಲಿ ಮಂಡಿಸುತ್ತಾರೆ.

**ಕನ್ನಡ ಸಾಹಿತ್ಯವನ್ನು ಕಲಿಸುವುದರ ಹಿಂದೆ ಇರುವ ಗುರಿಗಳು:**

- ಕನ್ನಡ ಭಾಷೆಯು ಸಾಹಿತ್ಯದಲ್ಲಿ ಸೃಜನಶೀಲವಾಗಿ ಅಭಿವ್ಯಕ್ತವಾಗುವ ಕ್ರಮವನ್ನು ಗುರುತಿಸಿಕೊಡುವುದು.
- ವಿವಿಧ ಕವಿಗಳು ವಿಭಿನ್ನವಾಗಿ ತಮ್ಮ ಅಭಿವ್ಯಕ್ತಿಯ ಕ್ರಮವನ್ನು ಕಂಡುಕೊಂಡಿರುವುದನ್ನು ಅರಿಯುವಂತೆ ಮಾಡುವುದು.
- ಕನ್ನಡ ಭಾಷೆಯು ತನ್ನ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸಿಕೊಂಡಿರುವ ಸಾಹಿತ್ಯ ಭಾಷೆಯ ಕ್ರಮಗಳನ್ನು ವಿದ್ಯಾರ್ಥಿಗಳು ಗಮನಿಸುವಂತೆ ಮಾಡುವುದು.
- ಪದವಿ ತರಗತಿಯಲ್ಲಿ ವಿದ್ಯಾರ್ಥಿಗಳು ಕಲಿಯುವ ವಿಷಯಕ್ಕೂ ಸಾಹಿತ್ಯದಲ್ಲಿ ಇಂತಹ ವಿಷಯವು ಅಭಿವ್ಯಕ್ತವಾಗಿರುವ ಕ್ರಮಕ್ಕೂ ಇರುವ ಅಂತರವನ್ನು ತಿಳಿಯುತ್ತಾ, ಸೃಜನಶೀಲ ನೆಲೆಯಲ್ಲಿ ಒಂದು ವಿಷಯವು ವಿಭಿನ್ನ ಬಗೆಗಳಲ್ಲಿ ಹೇಗೆ ಅಭಿವ್ಯಕ್ತವಾಗುತ್ತದೆ ಎನ್ನುವುದನ್ನು ತಿಳಿಯುವಂತೆ ಮಾಡುವುದು.
- ವರ್ತಮಾನದ ತಲ್ಲಣಗಳಿಗೆ ಸಾಹಿತಿಗಳು ತಮ್ಮ ಸೃಜನಶೀಲ ನೆಲೆಯಲ್ಲಿ ಕಂಡುಕೊಳ್ಳುವ ಪರಿಹಾರವನ್ನು ವಿದ್ಯಾರ್ಥಿಗಳು ಕಲಿಯುವ ಬಗೆಯನ್ನು ತಿಳಿಸಿಕೊಡುವುದು.
- ಸಂವಹನ ಭಾಷೆ, ಸಾಹಿತ್ಯದ ಭಾಷೆಯ ನಡುವಿನ ವ್ಯತ್ಯಾಸವನ್ನು ಅರಿಯುವಂತೆ ಮಾಡುವುದು.

**ಭಾಷಾ ಕೌಶಲ್ಯದ ಗುರಿ:**

- ವಿದ್ಯಾರ್ಥಿಗಳು ಸಾಹಿತ್ಯದ ತರಗತಿಯಲ್ಲಿ ವಿವಿಧ ಕವಿಗಳ/ಲೇಖಕರ ಭಾಷಾ ಬಳಕೆಯನ್ನು ಗಮನಿಸಿ, ಇದೇ ಮಾದರಿಯಲ್ಲಿ ವಿಭಿನ್ನ ರೀತಿಯಲ್ಲಿ ತಾವೂ ಬಳಸಿಕೊಳ್ಳುವ ಸಾಧ್ಯತೆಗಳನ್ನು ತರಗತಿಯಲ್ಲಿ ಅಭ್ಯಾಸ ಮಾಡುತ್ತಾರೆ.
- ಇಂತಹ ಅಭ್ಯಾಸವು ಮಾತಿನಲ್ಲಿ, ಬರವಣಿಗೆಯಲ್ಲಿ ಮತ್ತು ಅಭಿವ್ಯಕ್ತಿಯ ಚಟುವಟಿಕೆಯಾಗಿ– ಇವೆಲ್ಲವೂ ಕ್ರಮೇಣ ಒಂದು ಕೌಶಲ್ಯವಾಗಿ ಬೆಳವಣಿಗೆ ಹೊಂದುತ್ತದೆ.
- ಇಂತಹ ಕೌಶಲ್ಯಗಳಲ್ಲಿ ವಿವಿಧ ವಿಷಯಗಳನ್ನು ಬೇರೆ ಬೇರೆ ರೀತಿಯಲ್ಲಿ ಅಭಿವ್ಯಕ್ತ ಮಾಡುವುದನ್ನು ಕಲಿಯುತ್ತಾರೆ.

**ಸಾಹಿತ್ಯ ಮತ್ತು ಕೌಶಲ್ಯದ ಕಲಿಕೆಯ ಫಲಿತಗಳು:**

- ತಮ್ಮ ವೃತ್ತಿ ಜೀವನದಲ್ಲಿ ಭಾಷೆಯ ಬಳಕೆಯ ಸ್ವರೂಪವು ವಿವಿಧ ಜನರಲ್ಲಿ ವಿವಿಧ ಬಗೆಯಾಗಿ ಇರುವುದನ್ನು ಕಂಡುಕೊಳ್ಳುತ್ತಾರೆ.
- ಇದರಿಂದ ಭಾಷಾ ಬಳಕೆಗೂ ವ್ಯಕ್ತಿಯ ಮನಸ್ಸಿನ ಆಲೋಚನೆಗೂ ಸಂಬಂಧ ಇರುವುದನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳುತ್ತಾರೆ.
- ವೃತ್ತಿರಂಗದಲ್ಲಿ, ಸಮಾಜದಲ್ಲಿ ಯಶಸ್ಸನ್ನು ದೊರಕಿಸಿಕೊಳ್ಳಲು ಸೃಜನಶೀಲವಾದ ಭಾಷೆಯ ಬಳಕೆಯ ಮಹತ್ವವನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳುತ್ತಾರೆ.
- ಸಾಹಿತ್ಯ ಭಾಗ–1 ಮತ್ತು ಕೌಶಲ್ಯ ಭಾಗ–2 ರಲ್ಲಿ ಕಲಿತದ್ದನ್ನು ಪರಸ್ಪರ ಹೊಂದಿಸಿಕೊಂಡು ಬಳಸಿಕೊಳ್ಳುವ ಸಾಮರ್ಥ್ಯವು ಭಾಷಾ ಕಲಿಕೆಯ ಫಲಿತವಾಗಿರುತ್ತದೆ.

**ಬೋಧನೆಯ ಸ್ವರೂಪ:**

ಉಪನ್ಯಾಸ, ಸಂಭಾಷಣಾ ರೂಪದ ಬೋಧನೆಯು ಸಾಹಿತ್ಯದ ಭಾಗದಲ್ಲಿ ಪ್ರಧಾನವಾಗಿರುತ್ತದೆ. ಇದರ ಮೂಲಕ ಅಧ್ಯಾಪಕರ ಕೇಂದ್ರಿತವಾದ ಬೋಧನೆಯು ಪ್ರಧಾನ ನೆಲೆಯಲ್ಲಿದ್ದರೂ, ಪ್ರತೀ ಪಠ್ಯದ ಕೊನೆಯ ಭಾಗದಲ್ಲಿನ ಭಾಷಾ ಚಟುವಟಿಕೆಗಳು ವಿದ್ಯಾರ್ಥಿಗಳು ಭಾಷೆಯಲ್ಲಿ ಬಳಕೆಯಾಗುವ ವಿವಿಧ ಸಾಧನಗಳನ್ನು ಅರಿಯುತ್ತಾ ಅಭ್ಯಾಸದಲ್ಲಿನ ಪ್ರಶ್ನೆಗಳ ಮೂಲಕ ಕಲಿಯುತ್ತಾರೆ.

ಕೌಶಲ್ಯದ ಭಾಗದಲ್ಲಿನ ಮಾತು, ಬರಹ ಮತ್ತು ಚಟುವಟಿಕೆಯನ್ನು ವಿದ್ಯಾರ್ಥಿಗಳು ಅಧ್ಯಾಪಕರ ಮಾರ್ಗದರ್ಶನದ ಮೂಲಕ ತಮ್ಮ ಅನುಭವದಿಂದಲೇ ತರಗತಿಯಲ್ಲಿ ಪ್ರಾಯೋಗಿಕವಾಗಿ ಭಾಷೆಯನ್ನು ಬಳಸುವುದರಿಂದ ಕಲಿಯುತ್ತಾರೆ. ಇದಕ್ಕಾಗಿ ಪ್ರತೀ ವಿಭಾಗದಲ್ಲಿಯೂ ವಿಭಿನ್ನ ವಿಷಯಗಳು ಇವೆ. ಇದರೊಡನೆ ಸತತವಾದ ತರಗತಿಯಲ್ಲಿನ ಮೌಲ್ಯಮಾಪನ ವಿದ್ಯಾರ್ಥಿಗಳ ಕಾರ್ಯ ಚಟುವಟಿಕೆಗಳ ಬಗ್ಗೆ ಇರುತ್ತವೆ.

## ಮೌಲ್ಯಮಾಪನ

**ಆಂತರಿಕ ಮೌಲ್ಯಮಾಪನ ಮತ್ತು ಲಿಖಿತ ಮೌಲ್ಯಮಾಪನ:**

ನಿರಂತರವಾದ ಮೌಲ್ಯಮಾಪನವು ತರಗತಿಯ ಒಳಗಡೆ ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ 20 ಅಂಕಗಳು ಇರುತ್ತವೆ. ಇವುಗಳನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ. ಸೆಮಿಸ್ಟರ್ ಕೊನೆಯಲ್ಲಿನ ಲಿಖಿತ ಪರೀಕ್ಷೆ 80 ಅಂಕಗಳು, Formative Assessment ಹಾಗೂ Summative Assessment ಸೇರಿ ಒಟ್ಟು 100 ಅಂಕಗಳು.

| ಕ್ರಮ ಸಂಖ್ಯೆ | ಮಾನದಂಡಗಳು | ಅಂಕಗಳು |
|---|---|---|
| 1 | ಸೆಮಿನಾರ್ | 05 |
| 2 | ಪರೀಕ್ಷೆಗಳ ಮೂಲಕ ಆಂತರಿಕ ಮೌಲ್ಯಮಾಪನ | 10 |
| 3 | ನಿಯೋಜಿತ ಕಾರ್ಯ ( ಎಫ್ ಎ) | 05 |
| | ಒಟ್ಟು(1+2+3) | 20 |
| | ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್ ಎ) | 80 |
| | ಒಟ್ಟು ( ಎಫ್ ಎ+ ಎಸ್ ಎ) | 100 |

## ಬಿ.ಎ/ಬಿಎಚ್ಎಂ/ಬಿಎಸ್‌ಡಬ್ಲ್ಯೂ– ಮೂರನೇ ಸೆಮಿಸ್ಟರ್,

## ಕಲಾಸಂಪದ–3 : ಕನ್ನಡ ಭಾಷಾ ಪಠ್ಯ

## ಎಸ್.ಇ.ಪಿ ಪಠ್ಯಕ್ರಮ

| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
|---|---|
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| ಕ್ರ.ಸಂ | **ಭಾಗ 1 : ಸಾಹಿತ್ಯ**<br>ಪಠ್ಯ | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| 1 | ಸುಮತಿಯ ಕಥೆ –ಶಿವಕೋಟ್ಯಾಚಾರ್ಯ | 5 | 7 |
| 2 | ಒಲವಾದೊಡೆ ರೂಪಿನ ಕೋಟಲೆಯೇವುದೋ –ಜನ್ನ | 5 | 7 |
| 3 | ವಚನಗಳು –ಅಕ್ಕಮಹಾದೇವಿ, ಅಲ್ಲಮಪ್ರಭು, ಜೇಡರದಾಸಿಮಯ್ಯ | 5 | 6 |
| 4 | ನೆಳಲು ತನುವಿನ ಬಳಿಯೊಳಲ್ಲದೆ ಚಲಿಸುವುದೆ–ಕನಕದಾಸರು | 5 | 6 |
| 5 | ಹುಳಿ ಸಿಹಿ ಬಾಲ್ಯ –ಶಾರದಾ ವಿ ಮೂರ್ತಿ | 5 | 6 |
| 6 | ಸಂಬಳದ ಸಂಜೆ – ಕೆ.ಎಸ್. ನರಸಿಂಹಸ್ವಾಮಿ | 5 | 6 |
| 7 | ಘಾಟಿ ಸೊಸೆ – ಜನಪದ ಕಥೆ | 5 | 6 |
| 8 | ಯುಗಾದಿ – ವಸುಧೇಂದ್ರ | 5 | 6 |
| | **ಭಾಗ 2 : ಕೌಶಲ್ಯಗಳು** | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | **ಅಭಿವ್ಯಕ್ತಿ ಕೌಶಲ್ಯ**<br>ಸ್ವರೂಪ ಮತ್ತು ವಿವರಣೆ<br>**1. ಕಲಾಸಾಧಕರ ಪರಿಚಯ**<br>* ಗುಬ್ಬಿ ಕಂಪನಿ (ಗುಬ್ಬಿವೀರಣ್ಣ) –ಸಿಂಧುವಳ್ಳಿ ಅನಂತಮೂರ್ತಿ,<br>* ಕಲಾವಿದ ವೆಂಕಟಪ್ಪ<br>* ಕರ್ನಾಟಕದ ಮ್ಯಾಕ್ಸ್ ಮುಲ್ಲರ್ (ಫ.ಗು.ಹಳಕಟ್ಟಿ) – ಸಿಂಪಿಲಿಂಗಣ್ಣ | 7 | 10 |
| **ಬರಹ ಕೌಶಲ್ಯ** | **2. ಸಂಕ್ಷೇಪ ಲೇಖನ**<br>* ಸಂಕ್ಷೇಪ ಲೇಖನದ ಸ್ವರೂಪ<br>* ಸಂಕ್ಷೇಪ ಲೇಖನದ ಮುಖ್ಯಲಕ್ಷಣಗಳು<br>* ಸಂಕ್ಷೇಪ ಲೇಖನದ ವಿಧಾನ | 7 | 10 |
| **ಚಟುವಟಿಕೆಗಳು** | **3. ಚಟುವಟಿಕೆ**<br>ಸ್ಥಳೀಯ ಕಲಾವಿದರೊಬ್ಬರ ಜೊತೆ ಸಂದರ್ಶನ,<br>ಕನ್ನಡ ಜನಪದ ಕಲೆಗಳಿಗೆ ಸಂಬಂಧಿಸಿದಂತೆ ಭಿತ್ತಿ ಪತ್ರಗಳನ್ನು ತಯಾರಿಸಿ. | 6 | 10 |
| | ಒಟ್ಟು | 60 | 80 |

# ಬಿ.ಎಸ್ಸಿ/ಬಿಎಸ್ಆರ್ಎಸ್ – ಮೂರನೇ ಸೆಮಿಸ್ಟರ್

# ವಿಜ್ಞಾನ ಸಂಪದ–3, ಕನ್ನಡ ಭಾಷಾ ಪತ್ಯ

# ಎಸ್.ಇ.ಪಿ ಪಠ್ಯಕ್ರಮ

| | |
|---|---|
| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| **ಭಾಗ 1 : ಸಾಹಿತ್ಯ** | | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪಠ್ಯ | | |
| 1 | ಶಿವಭೂತಿಯ ಕಥೆ –ದುರ್ಗಸಿಂಹ | 5 | 7 |
| 2 | ಮೇರುವನೆಳೆದರೆ ಬಹುದೇ! –ರತ್ನಾಕರವರ್ಣಿ | 5 | 7 |
| 3 | ವಚನ ಚಿಂತನ | 5 | 6 |
| 4 | ಡಾ.ಸಿ.ಎನ್.ಆರ್. ರಾವ್–ವ್ಯಕ್ತಿ ಚಿತ್ರ– ಕವಿತಾ ಯಾದವ್ | 5 | 6 |
| 5 | ಅಜ್ಜಯ್ಯನ ಅಭ್ಯಂಜನ –ಕುವೆಂಪು | 5 | 6 |
| 6 | ಲಿಮೆಕ್ಸ್ ಕಲ್ಲಿನ ಕಾಗದ –ಎಸ್. ಸೀತಾರಾಮು | 5 | 6 |
| 7 | ಚೀಂಕ್ರಮೇಸ್ತ್ರಿ ಮತ್ತು ಅರಿಸ್ಟಾಟಲ್ –ಪೂರ್ಣಚಂದ್ರ ತೇಜಸ್ವಿ | 5 | 6 |
| 8 | ತ್ರಿಪದಿಗಳು –ಜಾನಪದ ಸಾಹಿತ್ಯ | 5 | 6 |
| **ಭಾಗ 2 : ಕೌಶಲ್ಯಗಳು** | | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | ಕೌಶಲ್ಯ ಎಂದರೇನು?<br>ಮಾತಿನ ಕೌಶಲ್ಯದ ಸ್ವರೂಪ ಮತ್ತು ಲಕ್ಷಣಗಳು<br>ತರಗತಿಯಲ್ಲಿ ಮಂಡಿಸುವ ವಿಷಯಗಳು:<br>* ಸರ್. ಸಿ.ವಿ. ರಾಮನ್,<br>* ಸರ್. ಎಂ. ವಿಶ್ವೇಶ್ವರಯ್ಯ,<br>* ಹೋಮಿ ಜಹಾಂಗೀರ್ ಬಾಬಾ | 7 | 10 |
| **ಬರಹ ಕೌಶಲ್ಯ** | ಟಿಪ್ಪಣಿ ತಯಾರಿಕೆ, ಸ್ವರೂಪ<br>ಟಿಪ್ಪಣಿ ತಯಾರಿಸಲು ವಿಷಯಗಳು<br>* ಪೆಟ್ರೋಲಿಯಂ, * ಪರ್ವತಗಳ ಉಗಮ, * ಸುಣ್ಣ ಶಿಲಾ ಗುಹೆಗಳು | 7 | 10 |
| **ಚಟುವಟಿಕೆಗಳು** | ವಿಜ್ಞಾನಿಗಳು ಮತ್ತು ಅವರ ಸಾಧನೆಗಳನ್ನು ಕುರಿತ ಕೊಲಾಜ್ ಸಿದ್ಧಪಡಿಸಿ.<br>ಅಳಿವಿನಂಚಿನ ಜೀವಿಗಳು ಕುರಿತು ಸುದ್ದಿ ಫಲಕಗಳ ತಯಾರಿಕೆ<br>ಹಾರುವ ತಟ್ಟೆ, ಬರ್ಮುಡಾ ಟ್ರಯಾಂಗಲ್, ಜೀವಂತ ಜ್ವಾಲಾಮುಖಿಗಳು – ಈ ಬಗ್ಗೆ ಮಾಹಿತಿ ಫಲಕ ತಯಾರಿಕೆ. | 6 | 10 |
| | ಒಟ್ಟು | 60 | 80 |

# ಬಿ.ಕಾಂ – ಮೂರನೇ ಸೆಮಿಸ್ಟರ್ ವಾಣಿಜ್ಯ ಸಂಪದ–3, ಕನ್ನಡ ಭಾಷಾ ಪತ್ಯ

## ಎಸ್.ಇ.ಪಿ ಪಠ್ಯಕ್ರಮ

| | |
|---|---|
| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| | **ಭಾಗ 1 : ಸಾಹಿತ್ಯ** | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪಠ್ಯ | | |
| 1 | ಕಾಸಿಗೊಂದು ಸೇರು – ಜನಪದ ಕಥೆ | 5 | 7 |
| 2 | ಧರ್ಮಬುದ್ಧಿ ದುಷ್ಟಬುದ್ಧಿ ಕಥೆ–ದುರ್ಗಸಿಂಹ | 5 | 7 |
| 3 | ವಚನಗಳು–ಆಯ್ದಕ್ಕಿ ಲಕ್ಕಮ್ಮ, ಆಯ್ದಕ್ಕಿ ಮಾರಯ್ಯ, ಅಕ್ಕಮ್ಮ, ಸತ್ಯಕ್ಕ, ಉರಿಲಿಂಗಪೆದ್ದಿ | 5 | 6 |
| 4 | ಪಾಪದಿಂದಾರ್ಜಿಸಿದೊಡರ್ಥವ ನಾ ಫಲವನುಂಬವರಿಗಿಲ್ಲ–ಕುಮಾರವ್ಯಾಸ | 5 | 6 |
| 5 | ತತ್ತ್ವಪದಗಳು–ಶಿಶುನಾಳ ಷರೀಫ, ನಾಗಲಿಂಗಯತಿ | 5 | 6 |
| 6 | ಪೆರುವಿನತ್ತ ಪಯಣ–ನೇಮಿಚಂದ್ರ | 5 | 6 |
| 7 | ಖರೀದಿ ಮತ್ತು ಮಾರಾಟ–ಮೂಲ: ಖಲೀಲ್ ಗಿಬ್ರಾನ್ ಕನ್ನಡಕ್ಕೆ–ಚಿದಂಬರ ನರೇಂದ್ರ | 5 | 6 |
| 8 | ಅರ್ಧ ಕಥಾನಕ–ಡಾ. ಎಂ. ಉಷಾ | 5 | 6 |
| | **ಭಾಗ 2 : ಕೌಶಲ್ಯಗಳು** | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತು** | * ವೇದಿಕೆಗಳಲ್ಲಿ ಬಳಸುವ ಮಾತು ಹಾಗೂ ಅದರ ಪ್ರಾಮುಖ್ಯತೆ<br>* ಉದ್ಯೋಗಾಕಾಂಕ್ಷಿಗಳಿಗೆ ಸಮೂಹ ಚರ್ಚೆಯ ಮಹತ್ವ<br>* ಎಫ್.ಎಂ. ರೇಡಿಯೋದಲ್ಲಿ ಮಾತನಾಡುವುದು | 7 | 10 |
| **ಬರಹ ಕೌಶಲ್ಯ** | * ಇ–ಮೇಲ್ ಸಿದ್ಧಪಡಿಸುವುದು<br>* ಸಾಮಾಜಿಕ ಮಾಧ್ಯಮದಲ್ಲಿ ವಿಷಯ ಬರವಣಿಗೆ<br>* ಬ್ಲಾಗ್ ಬರವಣಿಗೆ | 7 | 10 |
| **ಚಟುವಟಿಕೆಗಳು** | ವರ್ತಮಾನ ಘಟನೆ ಅಥವಾ ವಿಷಯಾಧಾರಿತ ಆಶುಭಾಷಣ, ಜಾಹೀರಾತುಗಳಲ್ಲಿ ಕಂಡುಬರುವ ಕನ್ನಡ ಭಾಷಾ ವೈವಿಧ್ಯತೆಯ ಸ್ವರೂಪವನ್ನು ಪ್ರಸ್ತುತ ಪಡಿಸುವುದು, ಕಾರ್ಯಕ್ರಮವೊಂದರ ನಿರೂಪಣೆ/ ಸ್ವಾಗತ/ ವಂದನಾರ್ಪಣೆ ಸಿದ್ಧಪಡಿಸುವುದು.<br>**ವಿದ್ಯಾರ್ಥಿಗಳ ಆಸಕ್ತಿ ಹೆಚ್ಚಿಸುವ ಚಟುವಟಿಕೆ:**<br>ಟೆಡೆಕ್ಸ್‌ನ ವಿಡಿಯೋ ತೋರಿಸಿ ಅದರ ಬಗ್ಗೆ ವಿಮರ್ಶೆ/ ವರದಿ ಬರೆಯುವುದು/ ಸಹ ವಿದ್ಯಾರ್ಥಿಗಳನ್ನು ಚರ್ಚೆಗೆ ತೊಡಗಿಸಿಕೊಳ್ಳುವುದು. | 6 | 10 |
| | ಒಟ್ಟು | 60 | 80 |

**ಬಿ.ಡಿ.ಎ/ಬಿಎಲ್ಎಸ್ಸಿಎಂ/ಬಿಫಿನ್‌ಟೆಕ್/ಬಿಎ&ಎಫ್/ಬಿಎಇಡಿಪಿ(ಬಿಎಫ್ಎಸ್ಐ/ ಆರ್ ಓಎಂ)/ಬಿಟಿಟಿಎಂ/ ಟಿಟಿಎಂ/– ಮೂರನೇ ಸೆಮಿಸ್ಟರ್**

# ವಾಣಿಜ್ಯ ವಿಶ್ಲೇಷಣಾ ಸಂಪದ–3 ಕನ್ನಡ ಭಾಷಾ ಪಠ್ಯ

## ಎಸ್.ಇ.ಪಿ ಪಠ್ಯಕ್ರಮ

| | |
|---|---|
| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| **ಭಾಗ 1 : ಸಾಹಿತ್ಯ** | | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪಠ್ಯ | | |
| 1 | ವಚನಗಳು | 5 | 7 |
| 2 | ಹರಿಣಬಾಲಿಯ ಕಥೆ – ನಾಗರಾಜ | 5 | 7 |
| 3 | ಎಣ್ಣೆ! ಚಿಮಿಣಿ ಎಣ್ಣೆ! – ನಿರಂಜನ | 5 | 6 |
| 4 | ಭಾಸಿಂಗ ಬಲ – ಶ್ರೀನಿವಾಸ್ ವೈದ್ಯ | 5 | 6 |
| 5 | ಸುತ್ತೆಲ್ಲ ಜನಪದ ಹಾಡಿರಲಿ – ಜಾನಪದ | 5 | 6 |
| 6 | ಅವತಾರ – ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ | 5 | 6 |
| 7 | ನಂ ರೂಪ್ಲಿ – ಬಿ.ಟಿ.ಲಲಿತಾ ನಾಯಕ್ | 5 | 6 |
| 8 | ದೈವತ್ವಕ್ಕೆ ತೇರ್ಗಡೆಯಾದ ಮಾನವ –ರತನ್ ಟಾಟಾ– ಎಂ.ಎಸ್.ಶ್ರೀರಾಮ್ | 5 | 6 |
| **ಭಾಗ 2 : ಕೌಶಲ್ಯಗಳು** | | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | ಸ್ವರೂಪ ಮತ್ತು ವಿವರಣೆ,<br>ವಿಷಯಗಳು: * ಗುರುರಾಜ್ ಕರ್ಜಗಿ<br>* ಆರ್ ಎನ್ ಶೆಟ್ಟಿ<br>* ವಿಆರ್‌ಎಲ್ ಸಮೂಹ | 7 | 10 |
| **ಬರಹ ಕೌಶಲ್ಯ** | ಸ್ವರೂಪ ಮತ್ತು ವಿವರಣೆ<br>ವಿಷಯಗಳು: * ಮೀಟಿಂಗ್ ಮಿನಿಟ್‌ಗಳು<br>* ಟೆಂಡರ್ ಕರೆಯಲು ಪತ್ರಿಕಾ ಪ್ರಕಟಣೆ<br>* ವಾರ್ಷಿಕ ವರದಿ, ಅಭ್ಯರ್ಥನ ಪತ್ರ | 7 | 10 |
| **ಚಟುವಟಿಕೆಗಳು** | ಜಾಹೀರಾತು: ಸ್ವರೂಪ ಮತ್ತು ವಿವರಣೆ<br>ತರಗತಿಯಲ್ಲಿ ಮಂಡಿಸಬೇಕಾದ ವಿಷಯಗಳು:<br>* ಹಾಲಿನ ಉತ್ಪನ್ನಗಳ ಕನ್ನಡ ಜಾಹೀರಾತು<br>* ಪುಸ್ತಕ ಮಾರಾಟ ಕನ್ನಡ ಜಾಹೀರಾತು<br>* ಡಿಜಿಟಲ್ ಮಾಧ್ಯಮದ ಕನ್ನಡ ಜಾಹೀರಾತು<br>* ಆರೋಗ್ಯ ತಪಾಸಣಾ ಶಿಬಿರದ ಕನ್ನಡ ಜಾಹೀರಾತು | 6 | 10 |
| | ಒಟ್ಟು | 60 | 80 |

# ಬಿ.ಬಿ.ಎ/ಬಿಬಿಎ(ಎವಿಯೇಷನ್) ಮೂರನೇ ಸೆಮಿಸ್ಟರ್

## ನಿರ್ವಹಣಾ ಸಂಪದ–3 ಕನ್ನಡ ಭಾಷಾ ಪಠ್ಯ

## ಎಸ್.ಇ.ಪಿ ಪಠ್ಯಕ್ರಮ

| | |
|---|---|
| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| **ಭಾಗ 1 : ಸಾಹಿತ್ಯ** | | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪಠ್ಯ | | |
| 1 | ಸುಕುಮಾರಸ್ವಾಮಿಯ ಕಥೆ (ವಡ್ಡಾರಾಧನೆ) –ಶಿವಕೋಟ್ಯಾಚಾರ್ಯ | 5 | 7 |
| 2 | ವಚನ ಚಿಂತನ – ಬಸವಣ್ಣ, ಸುಂಕದ ಬಂಕಣ್ಣ, ಅಕ್ಕಮಹಾದೇವಿ, ಒಕ್ಕಲಿಗ ಮುದ್ದಣ್ಣ, ಅಲ್ಲಮಪ್ರಭು | 5 | 7 |
| 3 | ದ್ಯೂತದ ಪ್ರಸಂಗ (ಆಯ್ದಭಾಗ)– ಕುಮಾರವ್ಯಾಸ | 5 | 6 |
| 4 | ಸೈನಿಕರ ಬಗೆಗಿನ ಹಾಡು (ಬೆಪ್ತತಕ್ಕಡಿ ಬೋಳೇಶಂಕರ ನಾಟಕದ ಆಯ್ದಭಾಗ)– ಚಂದ್ರಶೇಖರ ಕಂಬಾರ | 5 | 6 |
| 5 | ಮುಕ್ತ ವ್ಯಾಪಾರ, ಜಾಗತಿಕ ಮಾರುಕಟ್ಟೆಗಳು ಹಾಗೂ ಸೈನಿಕ ಸಾಹಸಗಳು– ಮೂಲ: ನೋಮ್ ಚಾಮ್‌ಸ್ಕಿ, ಕನ್ನಡಾನುವಾದ : ಸಿ.ನಾಗಣ್ಣ | 5 | 6 |
| 6 | ಮೈಸೂರು ದೊರೆ ಕಥೆ– ಜನಪದ ಲಾವಣಿ | 5 | 6 |
| 7 | ರೇಖೆಗಳ ವೈಖರಿ– ಎಸ್. ದಿವಾಕರ | 5 | 6 |
| 8 | ಬೀಗ ಮತ್ತು ಬೀಗದ ಕೈ– ಯಶವಂತ ಚಿತ್ತಾಲ | 5 | 6 |
| **ಭಾಗ 2 : ಕೌಶಲ್ಯಗಳು** | | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | ಕೌಶಲ್ಯ ಎಂದರೇನು? ಮಾತಿನ ಕೌಶಲ್ಯದ ಸ್ವರೂಪ ಮತ್ತು ಲಕ್ಷಣಗಳು<br>ತರಗತಿಯಲ್ಲಿ ಮಂಡಿಸಬೇಕಾದ ವಿಷಯಗಳು: * ಕೆಲಸಗಾರರ ಗುಣಮಟ್ಟದ ಸುಧಾರಣೆ, * ಕಾಯ್‌ಜನ್, * ಕರ್ನಾಟಕದ ಯಶಸ್ವಿ ಉದ್ದಿಮೆದಾರರ ಬಗ್ಗೆ | 7 | 10 |
| **ಬರಹ ಕೌಶಲ್ಯ** | ಟಿಪ್ಪಣಿ ತಯಾರಿಕೆ, ಟಿಪ್ಪಣಿ ತಯಾರಿಕೆಯ ಸ್ವರೂಪ<br>ಟಿಪ್ಪಣಿ ತಯಾರಿಕೆಯ ವಿಷಯಗಳು: * ಕಂಪನಿಯ ಮೇಲ್ವಿಚಾರಕರ ಜವಾಬ್ದಾರಿ, * ನಿರ್ವಹಣಾ ಕೌಶಲ್ಯ, * ಕಂಪನಿಯ ವೆಚ್ಚ ತಗ್ಗಿಸುವ ಉಪಾಯಗಳು | 7 | 10 |
| **ಚಟುವಟಿಕೆಗಳು** | ಚಟುವಟಿಕೆಗಳ ಸ್ವರೂಪ:<br>ತರಗತಿಯಲ್ಲಿ ಮಂಡಿಸಬೇಕಾದ ಚಟುವಟಿಕೆಗಳ ವಿಷಯಗಳು:<br>* ಭಾರತದ ಪಾರಂಪರಿಕ ನಿರ್ವಹಣಾ ಕೌಶಲ್ಯ, * ದತ್ತಾಂಶ ಸಂಗ್ರಹ,<br>* ಮಹಿಳಾ ಉದ್ಯಮಿಯ ಸಂದರ್ಶನ | 6 | 10 |
| | ಒಟ್ಟು | 60 | 80 |

**ಬಿ.ಸಿ.ಎ/ಬಿ.ವೋಕ್/ಡಾಟಾ ಸೈನ್ಸ್/ಎಐ– ಮೂರನೇ ಸೆಮಿಸ್ಟರ್**

**ಗಣಕ ಸಂಪದ–3 ಕನ್ನಡ ಭಾಷಾ ಪತ್ಯ**

**ಎಸ್.ಇ.ಪಿ ಪತ್ಯಕ್ರಮ**

| | |
|---|---|
| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| **ಭಾಗ 1 : ಸಾಹಿತ್ಯ** | | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪತ್ಯ | | |
| 1 | ವಿದ್ಯುಚ್ಚೋರನೆಂಬ ರಿಸಿಯ ಕಥೆ – ಶಿವಕೋಟ್ಯಾಚಾರ್ಯ | 5 | 7 |
| 2 | ಅಭಯ ರುಚಿ ಅಭಯ ಮತಿ – ಜನ್ನ | 5 | 7 |
| 3 | ವಚನಗಳು : ಜೇಡರ ದಾಸಿಮಯ್ಯ, ಹಡಪದ ಅಪ್ಪಣನ ಪುಣ್ಯಸ್ತ್ರೀ ಲಿಂಗಮ್ಮನ ವಚನಗಳು, ಅಂಬಿಗರ ಚೌಡಯ್ಯ | 5 | 6 |
| 4 | ಭೇದದಲಿ ಹೊಕ್ಕಿರಿದನೋ – ಕುಮಾರವ್ಯಾಸ | 5 | 6 |
| 5 | ಮಂಟೇಸ್ವಾಮಿ ಕಾವ್ಯ– ಜನಪದ | 5 | 6 |
| 6 | ನಿಮ್ಮ ಹಾದಿಯಲ್ಲಿ– ಎಚ್.ಎಲ್.ಪುಷ್ಪ | 5 | 6 |
| 7 | ಎ ಐ ಎಂಬ ಮಂತ್ರದಂಡ – ರಮೇಶ್ ನಿಂಬೆ ಮರದಳ್ಳಿ | 5 | 6 |
| 8 | ನಮ್ಮದಲ್ಲದ ಪಾತ್ರ – ವಸುಧೇಂದ್ರ | 5 | 6 |
| **ಭಾಗ 2 : ಕೌಶಲ್ಯಗಳು** | | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | ಕೌಶಲ್ಯ ಎಂದರೇನು? ಮಾತಿನ ಕೌಶಲ್ಯದ ಸ್ವರೂಪ ಮತ್ತು ಲಕ್ಷಣಗಳು<br>ತರಗತಿಯಲ್ಲಿ ಮಂಡಿಸಬೇಕಾದ ವಿಷಯಗಳು:<br>* ಕಸ್ತೂರಿ ರಂಗಾಚಾರ್ – ಟಿ.ಜಿ.ಶ್ರೀನಿಧಿ<br>* ಕೆ.ಪಿ.ರಾವ್<br>* ಡಾ. ಕೆ. ಚಿದಾನಂದಗೌಡ | 7 | 10 |
| **ಬರಹ ಕೌಶಲ್ಯ** | ಟಿಪ್ಪಣಿ ತಯಾರಿಕೆ, ಟಿಪ್ಪಣಿ ತಯಾರಿಕೆಯ ಸ್ವರೂಪ<br>ಟಿಪ್ಪಣಿ ತಯಾರಿಕೆಯ ವಿಷಯಗಳು: * ಅಂತರಜಾಲದಲ್ಲಿ ಕನ್ನಡ<br>* ಯಂತ್ರಾನುವಾದ (ಮಶೀನ್ ಟ್ರಾನ್ಸಲೇಶನ್)<br>* ಧ್ವನಿಯಿಂದ ಪಠ್ಯಕ್ಕೆ, ಪಠ್ಯದಿಂದ ಧ್ವನಿಗೆ – ಆಪ್‌ಗಳು<br>* ದನಿಯಚ್ಚು : ವಾಯ್ಸ್ ಟೈಪಿಂಗ್, ಇ–ಸ್ಪೀಕ್ : ವಿದ್ಯುಮಾತು | 7 | 10 |
| **ಚಟುವಟಿಕೆಗಳು** | * ಕನ್ನಡ ಪಠ್ಯ ಸಂಸ್ಕರಣೆ – ಎ.ಸತ್ಯನಾರಾಯಣ<br>* ಕನ್ನಡ ಕೃತಿಗಳ ಡಿಜಿಟಲೀಕರಣ<br>* ಕನ್ನಡದಲ್ಲಿ ಬ್ಲಾಗ್ ಸೃಷ್ಟಿಸುವ ಬಗೆ<br>* ಸಾಮಾಜಿಕ ಮಾಧ್ಯಮಗಳಲ್ಲಿ ಭಾಷೆಯ ಬಳಕೆ. | 6 | 10 |
| | ಒಟ್ಟು | 60 | 80 |

# ಬಿ.ಎಸ್ಸಿ(ಫ್ಯಾಡ್)/ಐಡಿಡಿ/ಬಿವಿಎ/ಬಿಎಸ್ಐಡಿ/ಬಿ.ಎಸ್ಸಿ.ಎನ್.ಡಿ ಮೂರನೇ ಸೆಮಿಸ್ಟರ್

# ವಿನ್ಯಾಸ ಸಂಪದ–3 ಕನ್ನಡ ಭಾಷಾ ಪತ್ಯ

## ಎಸ್.ಇ.ಪಿ ಪಠ್ಯಕ್ರಮ

| **ಚಾಲ್ತಿಗೆ ಬಂದ ವರ್ಷ: 2025–26** | **3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 60/62ಗಂಟೆಗಳು** |
|---|---|
| **ಒಟ್ಟು ಕ್ರೆಡಿಟ್ಸ್: 03** | **ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04 ಗಂಟೆಗಳು** |

| **ಭಾಗ 1 : ಸಾಹಿತ್ಯ** | | ಬೋಧನಾ ಅವಧಿ : 40 | ಅಂಕಗಳು : 50 |
|---|---|---|---|
| ಕ್ರ.ಸಂ | ಪಠ್ಯ | | |
| 1 | ನೀಲಾಂಜನೆಯ ನೃತ್ಯ ಪ್ರಸಂಗ – ಪಂಪ | 5 | 7 |
| 2 | ವಚನಗಳು – ವಿವಿಧ ವಚನಕಾರರು | 5 | 7 |
| 3 | ಸಭಾ ಮಂಟಪದ ನಿರ್ಮಾಣ– ಕುಮಾರವ್ಯಾಸ | 5 | 6 |
| 4 | ಗಿರಣಿ ವಿಸ್ತಾರ ನೋಡಮ್ಮ– ಶಿಶುನಾಳ ಶರೀಫ | 5 | 6 |
| 5 | ಮಗ್ಗದ ಸಾಹೇಬ – ಬಾಗಲೋಡಿ ದೇವರಾಯ | 5 | 6 |
| 6 | ಕವಚ – ಎಲ್. ಹನುಮಂತಯ್ಯ | 5 | 6 |
| 7 | ಹೂ ಬಿಡುವ ಮರ – ಜನಪದ ಕಥೆ | 5 | 6 |
| 8 | ಕೌದಿ : ಬಹುತ್ವದ ಸಂಕೇತ – ಪ್ರಿಯದರ್ಶಿನಿ ಶೆಟ್ಟರ್ | 5 | 6 |
| **ಭಾಗ 2 : ಕೌಶಲ್ಯಗಳು** | | ಬೋಧನಾ ಅವಧಿ : 20 | ಅಂಕಗಳು : 30 |
| **ಮಾತಿನ ಕೌಶಲ್ಯ** | ಕೌಶಲ್ಯ ಎಂದರೇನು? ಮಾತಿನ ಕೌಶಲ್ಯದ ಸ್ವರೂಪ ಮತ್ತು ಲಕ್ಷಣಗಳು<br>ತರಗತಿಯಲ್ಲಿ ಮಂಡಿಸಬೇಕಾದ ವಿಷಯಗಳು:<br>* ನಾನು ಮತ್ತು ರೇಷ್ಮೆ – ವೈ.ಕೆ.ರಾಮಯ್ಯ<br>* ಒಳಾಂಗಣ ವಿನ್ಯಾಸ<br>* ಆಭರಣಗಳು | 7 | 10 |
| **ಬರಹ ಕೌಶಲ್ಯ** | ಸ್ವರೂಪ ಮತ್ತು ವಿವರಣೆ<br>ತರಗತಿಯಲ್ಲಿ ಮಂಡಿಸಬೇಕಾದ ವಿಷಯಗಳು:<br>* ಇಳಕಲ್ ಸೀರೆ ಎಂಬ ಬಿಸಿಲು ಬೆಳದಿಂಗಳೂ–ಅನುಸೂಯ ಸಿದ್ಧರಾಮ,<br>* ಚಿತ್ರಕಲೆ, * ಕಸೂತಿ ಕಲೆ | 7 | 10 |
| **ಚಟುವಟಿಕೆಗಳು** | ಚಟುವಟಿಕೆ ಆಧಾರಿತ ಕೌಶಲ್ಯವನ್ನು ತರಗತಿಯಲ್ಲಿ ಮಂಡಿಸಲು<br>ವಿಷಯಗಳು:<br>* ಉಡುಪು ವಿನ್ಯಾಸದಲ್ಲಿ ಜಾಹೀರಾತು<br>* ಜಾಹೀರಾತಿನಲ್ಲಿ ಮಹಿಳೆ<br>* ಇಂದಿನ ಜಾಹೀರಾತು ಜಗತ್ತಿನ ಕನ್ನಡ ಸ್ವರೂಪ | 6 | 10 |
| | ಒಟ್ಟು | 60 | 80 |

# ಮಾದರಿ ಪ್ರಶ್ನೆಪತ್ರಿಕೆ

ಒಟ್ಟು ಅಂಕಗಳು: 80 ಸಮಯ: 03 ಗಂಟೆಗಳು

**I ಈ ಕೆಳಗಿನ ಐದು ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ. 5x2=10**

(ಒಟ್ಟು 8 ಪ್ರಶ್ನೆಗಳನ್ನು ಕೊಡಬೇಕು. ಭಾಗ–01ರಿಂದ 05 ಪ್ರಶ್ನೆಗಳು, ಭಾಗ–02ರಿಂದ 03 ಪ್ರಶ್ನೆಗಳನ್ನು ಕೊಡಬೇಕು. 5 ಪ್ರಶ್ನೆಗಳಿಗೆ ಉತ್ತರಿಸುತ್ತಾರೆ.)

**II ಈ ಕೆಳಗಿನ ಆರು ಪ್ರಶ್ನೆಗಳಿಗೆ ಹತ್ತರಿಂದ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ. 6x5=30**

(ಒಟ್ಟು 8 ಪ್ರಶ್ನೆಗಳನ್ನು ಕೊಡಬೇಕು. ಭಾಗ–01 ರಿಂದ 05 ಪ್ರಶ್ನೆಗಳು, ಭಾಗ–02 ರಿಂದ 03 ಪ್ರಶ್ನೆಗಳನ್ನು ಕೊಡಬೇಕು. 06 ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗ–2ರಿಂದ 2 ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.)

**III ಈ ಕೆಳಗಿನ ನಾಲ್ಕು ಪ್ರಶ್ನೆಗಳಿಗೆ ಇಪ್ಪತ್ತರಿಂದ ಇಪ್ಪತ್ತೈದು ವಾಕ್ಯಗಳಲ್ಲಿ ಉತ್ತರಿಸಿ. 4x10=40**

(ಒಟ್ಟು 06 ಪ್ರಶ್ನೆಗಳನ್ನು ಕೊಡಬೇಕು. ಭಾಗ–01 ರಿಂದ 03 ಪ್ರಶ್ನೆಗಳು, ಭಾಗ–02 ರಿಂದ 03 ಪ್ರಶ್ನೆಗಳನ್ನು ಕೊಡಬೇಕು. 4 ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ಭಾಗ–2ರಿಂದ 2 ಪ್ರಶ್ನೆಗೆ ಉತ್ತರಿಸತಕ್ಕದ್ದು.)

( ಕಡ್ಡಾಯವಾಗಿ ಬರೆಯಬೇಕಾದ್ದನ್ನು ಪ್ರಶ್ನೆಪತ್ರಿಕೆಯಲ್ಲಿ ನಮೂದು ಮಾಡತಕ್ಕದ್ದು)

## ಕನ್ನಡ ಐಚ್ಛಿಕ ಪತ್ಯ

ಕನ್ನಡ ಸಾಹಿತ್ಯವನ್ನು ವಿಶೇಷ ವಿಷಯವನ್ನಾಗಿ ತೆಗೆದುಕೊಂಡು ಅಧ್ಯಯನ ಮಾಡುವ ವಿದ್ಯಾರ್ಥಿಗಳಿಗೆ ನಿಗಧಿಪಡಿಸಿದ ಕನ್ನಡ ಐಚ್ಛಿಕ ಪತ್ಯವೇ ಸಾಹಿತ್ಯ ಸಂಪದ –3. ಇದರಲ್ಲಿ ಸಾಹಿತ್ಯವನ್ನು ವಿದ್ಯಾರ್ಥಿಗಳು ವಿಶೇಷವಾಗಿ ಅಧ್ಯಯನ ಮಾಡುತ್ತಾರೆ. ಮೂರನೇ ಸೆಮಿಸ್ಟರ್ ಪತ್ಯದಲ್ಲಿ ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಸಾಹಿತ್ಯ ಚಳುವಳಿಗಳ ಹಿನ್ನೆಲೆಯಲ್ಲಿ ಅಧ್ಯಯನ ಮಾಡುತ್ತಾರೆ.

### ಗುರಿ

- ಹೊಸಗನ್ನಡ ಸಾಹಿತ್ಯವು ವಸಾಹತುಶಾಹಿಯಿಂದ ಪ್ರೇರಣೆಯನ್ನು ಪಡೆದು ವಿವಿಧ ಪ್ರಕಾರಗಳಾಗಿ ಬೆಳೆಯುತ್ತಾ ಬಂದದ್ದನ್ನು ಗಮನಿಸುತ್ತಾರೆ.
- ಹೊಸಗನ್ನಡ ಸಾಹಿತ್ಯದ ಆರಂಭದ ಹಿಂದೆ ದೇಸಿಯ ಚಿಂತನೆಯ ಎಳೆಗಳು ಕೆಲಸ ಮಾಡಿದ ಚಿತ್ರಣವೂ ಇದರಲ್ಲಿದೆ.
- ವಿವಿಧ ಕಾಲಘಟ್ಟಗಳಲ್ಲಿ ದೇಸಿಯ ಚಿಂತನೆ ಮತ್ತು ಅನ್ಯ ಪ್ರಭಾವ ಇವುಗಳನ್ನು ಮೇಳೈಸಿಕೊಂಡು ನವೋದಯ, ಪ್ರಗತಿಶೀಲ, ನವ್ಯ ಮತ್ತು ನವ್ಯೋತ್ತರಗಳು ಮೂಡಿ ಬಂದದ್ದನ್ನು ಗಮನಿಸುತ್ತಾರೆ.
- ವಿವಿಧ ಸಾಹಿತ್ಯ ಚಳುವಳಿಗಳ ಸ್ವರೂಪ, ಹಿನ್ನೆಲೆ, ಪ್ರಭಾವ, ಪ್ರೇರಣೆ ಇವುಗಳನ್ನು ಗಮನಿಸುತ್ತಾ, ಸಾಹಿತ್ಯ ಒಡಮೂಡಿರುವುದನ್ನು, ಪರಿಸರದೊಡನೆ ಹೊಂದಿರುವ ಸಂಬಂಧವನ್ನು ಅರ್ಥಮಾಡಿಕೊಳ್ಳುತ್ತಾರೆ.

### ಫಲಿತ

- ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳು ಮತ್ತು ಸಾಹಿತ್ಯ ಚಳುವಳಿಗಳಿಗೂ ಇರುವ ಸಂಬಂಧವನ್ನು ವಿದ್ಯಾರ್ಥಿಗಳು ಅರಿಯುತ್ತಾರೆ. ಇದರಿಂದ ವಿವಿಧ ಘಟ್ಟಗಳಲ್ಲಿ ಸಾಹಿತ್ಯದ ಭಾಷೆಯು ಬದಲಾಗುತ್ತಾ ಹೋಗಿದ್ದನ್ನು ವಿದ್ಯಾರ್ಥಿಗಳು ಗುರುತಿಸಿಕೊಳ್ಳುತ್ತಾರೆ.
- ಸಾಹಿತ್ಯ ಭಾಷೆಯ ಬಗೆಗೆ ಸಂವೇದನಾಶೀಲತೆಯನ್ನು ವಿದ್ಯಾರ್ಥಿಗಳು ಗಳಿಸಿಕೊಳ್ಳುತ್ತಾರೆ.
- ಸಾಹಿತ್ಯವು ಹೊರಳುದಾರಿಯಲ್ಲಿ ಚಲಿಸಲು ಭಾಷೆ ಮತ್ತು ವಸ್ತುವಿನ ಸಂಬಂಧ ಮುಖ್ಯವಾದದ್ದು ಎಂದು ಅರಿತುಕೊಳ್ಳುತ್ತಾರೆ.

### ಬೋಧನಾ ಕ್ರಮ

- ಪತ್ಯವು ಸಾಹಿತ್ಯ ಚಳುವಳಿಗಳ ಬಗೆಗೆ ವಿವರಣೆಯನ್ನು ನೀಡುವುದರ ಜೊತೆಗೆ ಆಯಾಕಾಲಘಟ್ಟದ ಸಾಹಿತ್ಯ ಸ್ವರೂಪವನ್ನು ಒಳಗೊಂಡ ಕೃತಿಯನ್ನು ಉದಾಹರಣೆಯಾಗಿ ನೀಡಿದೆ. ಇದರಿಂದ ವಿದ್ಯಾರ್ಥಿಗಳು ಸಾಹಿತ್ಯ ಚಳುವಳಿಗಳು ಆಯಾ ಪ್ರಕಾರದ ಸಾಹಿತ್ಯದಲ್ಲಿ ಅರಳಿರುವ ಗುಣಲಕ್ಷಣಗಳನ್ನು ಗುರುತಿಸಿಕೊಳ್ಳುತ್ತಾರೆ. ಅಧ್ಯಾಪಕರು ಸಾಹಿತ್ಯದ ವಿವಿಧ ಘಟ್ಟಗಳ ಸಾಹಿತ್ಯದ ಗುಣಲಕ್ಷಣಗಳನ್ನು ಗುರುತಿಸಿಕೊಡುವುದರ ಮೂಲಕ ಬೋಧನೆಯನ್ನು ಮಾಡುತ್ತಾರೆ
- ಸೆಮಿನಾರ್‌ಗಳು ಮತ್ತು ಪ್ರಬಂಧ ಮಂಡನೆಯೂ ಬೋಧನೆಯ ಭಾಗವಾಗಿಯೇ ಇರುತ್ತವೆ.

# ಮೌಲ್ಯಮಾಪನ

**ಆಂತರಿಕ ಮೌಲ್ಯಮಾಪನ ಮತ್ತು ಲಿಖಿತ ಮೌಲ್ಯಮಾಪನ:**

ನಿರಂತರವಾದ ಮೌಲ್ಯಮಾಪನವು ತರಗತಿಯ ಒಳಗಡೆ ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ 20 ಅಂಕಗಳು ಇರುತ್ತವೆ. ಇವುಗಳನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ. ಸೆಮಿಸ್ಟರ್ ಕೊನೆಯಲ್ಲಿನ ಲಿಖಿತ ಪರೀಕ್ಷೆ 80 ಅಂಕಗಳು, Formative Assessment ಹಾಗೂ Summative Assessment ಸೇರಿ ಒಟ್ಟು 100 ಅಂಕಗಳು.

| ಕ್ರಮ ಸಂಖ್ಯೆ | ಮಾನದಂಡಗಳು | ಅಂಕಗಳು |
|---|---|---|
| 1 | ಸೆಮಿನಾರ್ | 05 |
| 2 | ಪರೀಕ್ಷೆಗಳ ಮೂಲಕ ಆಂತರಿಕ ಮೌಲ್ಯಮಾಪನ | 10 |
| 3 | ನಿಯೋಜಿತ ಕಾರ್ಯ( ಎಫ್ ಎ) | 05 |
| | ಒಟ್ಟು(1+2+3) | 20 |
| | ಸೆಮಿಸ್ಟರ್ ಅಂತ್ಯದ ಪರೀಕ್ಷೆ(ಎಸ್ ಎ) | 80 |
| | ಒಟ್ಟು ( ಎಫ್ ಎ+ ಎಸ್ ಎ) | 100 |

## ಬಿ.ಎ. ಐಚ್ಛಿಕ ಕನ್ನಡ–ಮೂರನೇ ಸೆಮಿಸ್ಟರ್, ಸಾಹಿತ್ಯ ಸಂಪದ–3 ಕನ್ನಡ ಭಾಷಾ ಪತ್ರ

## ಎಸ್.ಇ.ಪಿ. ಮಾದರಿ ಪತ್ರ

| ಚಾಲ್ತಿಗೆ ಬಂದ ವರ್ಷ: 2025–26 | 3ನೇ ಸೆಮಿಸ್ಟರ್–ಒಟ್ಟು ಉಪನ್ಯಾಸದ ಅವಧಿ: 78/80ಗಂಟೆಗಳು |
|---|---|
| ಒಟ್ಟು ಕ್ರೆಡಿಟ್ಸ್: 05 | ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 04+01=5 ಗಂಟೆಗಳು |

| ಕ್ರ.ಸಂ | ಪತ್ರ | ಉಪನ್ಯಾಸ +ಚಟುವಟಿಕೆ | ಅಂಕಗಳು |
|---|---|---|---|
| ಹೊಸಗನ್ನಡ ಸಾಹಿತ್ಯದ ಆರಂಭ | | 9+1 | 10 |
| ಹೊಸಗನ್ನಡ ಸಾಹಿತ್ಯದ ಪ್ರೇರಣೆ | | 9+1 | 10 |
| ಹೊಸಗನ್ನಡ ಸಾಹಿತ್ಯದ ಘಟ್ಟಗಳು | | 9+1 | 10 |
| 1 | ನವೋದಯ ಪೂರ್ವ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ<br>ತೆಂಕಣ ಗಾಳಿಯಾಟ : ಪಂಜೆ ಮಂಗೇಶರಾವ್ | 8+1 | 9 |
| 2 | ನವೋದಯ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ<br>ಬೆಳಗು : ಅಂಬಿಕಾತನಯದತ್ತ<br>ಸಾಲದ ಮಗು : ಕುವೆಂಪು | 7+1 | 8 |
| 3 | ಪ್ರಗತಿಶೀಲ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ<br>ಕೊನೆಯಗಿರಾಕಿ : ನಿರಂಜನ | 7+1 | 8 |
| 4 | ನವ್ಯ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ<br>ಭೂತ : ಗೋಪಾಲಕೃಷ್ಣ ಅಡಿಗ<br>ಕ್ರೌಂಚ : ರಾಮಚಂದ್ರ ದೇವ | 8+1 | 9 |
| 5 | ಬಂಡಾಯ, ದಲಿತ ಸಾಹಿತ್ಯದ ಸ್ವರೂಪ ಮತ್ತು ಲಕ್ಷಣ<br>ಕ್ಷಾಮ : ಬರಗೂರು ರಾಮಚಂದ್ರಪ್ಪ<br>ನನ್ನ ಜನಗಳು : ಸಿದ್ದಲಿಂಗಯ್ಯ | 7+1 | 8 |
| 6 | ಸ್ತ್ರೀ ಸಂವೇದನೆಯ ಸ್ವರೂಪ ಮತ್ತು ಲಕ್ಷಣ<br>ಗೊಂಬೆ : ಚ. ಸರ್ವಮಂಗಳಾ<br>ನಿರಾಕರಣೆ : ವೀಣಾ ಶಾಂತೇಶ್ವರ | 7+1 | 8 |
| | ಒಟ್ಟು | 80 ಗಂಟೆ | 80 ಅಂಕ |

# ಐಚ್ಛಿಕ ಕನ್ನಡ

## ಪ್ರಶ್ನೆ ಪತ್ರಿಕೆಯ ಸ್ವರೂಪ

**ಒಟ್ಟು ಅಂಕಗಳು : 80** **ಅವಧಿ : 3 ಗಂಟೆ**

I. ಈ ಕೆಳಗಿನ ಪ್ರಶ್ನೆಗಳಲ್ಲಿ 5ಕ್ಕೆ 4 ರಿಂದ 5 ವಾಕ್ಯಗಳಲ್ಲಿ ಉತ್ತರಿಸಿ 5**x**2=10

(8 ಪ್ರಶ್ನೆಗಳನ್ನು ಕೊಡಬೇಕು.)

II. ಈ ಕೆಳಗಿನವುಗಳಲ್ಲಿ 2 ಟಿಪ್ಪಣಿಗೆ ಉತ್ತರಿಸಿಃ 5**x** 2=10

( 4 ಪ್ರಶ್ನೆಗಳನ್ನು ಕೊಡಬೇಕು)

III. ಈ ಕೆಳಗಿನ ಪ್ರಶ್ನೆಗಳಲ್ಲಿ 6ಕ್ಕೆ 10 ರಿಂದ 15 ವಾಕ್ಯಗಳಲ್ಲಿ ಉತ್ತರಿಸಿ. 6**x**5=30

(8 ಪ್ರಶ್ನೆಗಳನ್ನು ಕೊಡಬೇಕು.)

IV. ಈ ಕೆಳಗಿನ ಪ್ರಶ್ನೆಗಳಲ್ಲಿ 3ಕ್ಕೆ 20 ರಿಂದ 25 ವಾಕ್ಯಗಳಲ್ಲಿ ಉತ್ತರಿಸಿ. 3**x**10=30

(5 ಪ್ರಶ್ನೆಗಳನ್ನು ಕೊಡಬೇಕು.)

# ಆಯ್ಕೆ ಪತ್ರಿಕೆ (Elective Paper).

## ಕರ್ನಾಟಕದ ಜನಪದ ಕಲೆಗಳು

**ಆಯ್ಕೆ ಪಠ್ಯಕ್ರಮದ ಸ್ವರೂಪ:**

ವಿದ್ಯಾರ್ಥಿಗಳು ತಾವು ಯಾವ ವಿಷಯದಲ್ಲಿ ಪದವಿ ಪಡೆಯಲು ಅಧ್ಯಯನ ಮಾಡುತ್ತಿದ್ದಾರೋ ಅದಕ್ಕಿಂತ ವಿಭಿನ್ನವಾದ ವಿಷಯವನ್ನು ಕಲಿಯಲು ಆಸಕ್ತಿಯಿಂದ ಆಯ್ಕೆ ಮಾಡಿಕೊಳ್ಳುವ ಪತ್ರಿಕೆ ಆಯ್ಕೆ ಪತ್ರಿಕೆ(Elective Paper). ಇದರಲ್ಲಿ ಕರ್ನಾಟಕದ ಕನ್ನಡ ಸಮುದಾಯದ ಸಂಸ್ಕೃತಿಯ ಕಲೆಯನ್ನು ಪರಿಚಯಿಸುವ ದೃಷ್ಟಿಕೋನವಿದೆ. ಇದು ಜನಪದ ಮೂಲದಿಂದ ಹುಟ್ಟಿದ ಕಲೆಯನ್ನು ಆಯ್ಕೆ ಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಕಲೆ, ಸಂಸ್ಕೃತಿಯಲ್ಲಿನ ಸೃಜನಶೀಲ ಅಂಶವನ್ನು ವಿದ್ಯಾರ್ಥಿಗಳು ಅರಿತುಕೊಂಡು, ಸೃಜನಶೀಲತೆಯನ್ನು ತಮ್ಮ ಅಧ್ಯಯನದ ವಿಷಯಗಳಿಗೂ ಅನ್ವಯಿಸಿಕೊಳ್ಳುತ್ತಾರೆ.

**ಗುರಿ:**

ಅನ್ಯವಿಭಾಗದ ವಿದ್ಯಾರ್ಥಿಗಳಿಗೆ ಕನ್ನಡ ಸಂಸ್ಕೃತಿಯ ಜೀವನ ವಿಧಾನದಲ್ಲಿಯೇ ರೂಪಿಸಿಕೊಂಡಿರುವ ಜನಪದ ಕಲೆಗಳನ್ನು ಕೂತೂಹಲ ಮತ್ತು ಆಸಕ್ತಿಯಿಂದ ನೋಡುವಂತೆ ಮಾಡುವ ಉದ್ದೇಶವಿದೆ. ಇವತ್ತಿನ ಜನಪ್ರಿಯ ಕಲೆಗಳಾದ ಸಿನಿಮಾ, ರಂಗಭೂಮಿಗಳು ಹೇಗೆ ಜನಪದ ಕಲೆಗಳಿಂದ ಪೋಷಣೆ ಮತ್ತು ಪ್ರಭಾವವನ್ನು ಪಡೆದಿವೆ ಎಂಬುದನ್ನು ಇದರ ಮೂಲಕ ಅರಿತುಕೊಳ್ಳುತ್ತಾರೆ.

**ಫಲಿತಗಳು:**

ವರ್ತಮಾನದ ಕಲೆಗಳ ಮೂಲಬೇರುಗಳು ಮನುಷ್ಯನ ಸಂಸ್ಕೃತಿಯಲ್ಲಿನ ಆರಂಭ ಕಾಲಘಟ್ಟದಲ್ಲಿನ ಆಚರಣೆಗಳೇ ಆಗಿವೆ ಎಂಬುದನ್ನು ತಿಳಿಯುತ್ತಾರೆ. ಮನುಷ್ಯ ಕಲೆಗಳಿಂದ ರಂಜನೆ ಪಡೆಯುವಾಗ್ಗೆ, ಇದರ ಹಿಂದೆ ಮಾನವನ ಮನಸ್ಸು ಕೆಲಸ ಮಾಡುವ ರೀತಿಯನ್ನು ಅರಿಯುವುದು ಅಗತ್ಯವಾದುದು. ಈ ದಿಸೆಯಲ್ಲಿ ಕಲೆಗಳನ್ನು ಶೈಕ್ಷಣಿಕ ಶಿಸ್ತಿಗೆ ಅಳವಡಿಸಿ ನೋಡುವ ಕ್ರಮವನ್ನು ವಿದ್ಯಾರ್ಥಿಗಳು ಕಲಿಯುತ್ತಾರೆ.

**ಬೋಧನೆಯ ಸ್ವರೂಪ:**

ಜನಪದ ಕಲೆಯ ಪ್ರಕಾರಗಳು ಆಯಾ ಭೌಗೋಳಿಕ ಪ್ರದೇಶದಿಂದ ಪ್ರಭಾವಿತಗೊಂಡಿರುವ ಕ್ರಮವನ್ನು ಅರಿಯುವಂತೆ ಅಧ್ಯಾಪಕರು ಬೋಧಿಸುತ್ತಾರೆ. ಇದರೊಡನೆ ಜನಪದ ಕಲೆಗಳು ಮಾನವನ ಆದಿಭೌತಿಕ ಗುಣಗಳನ್ನು ಕಲೆಯ ಮೂಲಕ ವ್ಯಕ್ತಪಡಿಸಿರುವ ರೀತಿಯನ್ನು ತಿಳಿಸುತ್ತಾರೆ. ಇದಕ್ಕೆ ಪೂರಕವಾಗಿ ಆಯಾ ಕಲೆಯ ಪಠ್ಯಭಾಗದಲ್ಲಿ ನೀಡಿರುವ ಒಂದೊಂದು ಆಯ್ದ ಉದಾಹರಣೆಯನ್ನು ತೆಗೆದುಕೊಂಡು ವಿದ್ಯಾರ್ಥಿಗಳಿಗೆ ತಿಳಿಸಿಕೊಡುತ್ತಾರೆ.

# ಮೌಲ್ಯಮಾಪನ

**ಆಂತರಿಕ ಮೌಲ್ಯಮಾಪನ ಮತ್ತು ಲಿಖಿತ ಮೌಲ್ಯಮಾಪನ:**

ನಿರಂತರವಾದ ಮೌಲ್ಯಮಾಪನವು ತರಗತಿಯ ಒಳಗಡೆ ನಡೆಯುತ್ತಲೇ ಇರುತ್ತದೆ. ಇದಕ್ಕಾಗಿ 10 ಅಂಕಗಳು ಇರುತ್ತವೆ. ಇವುಗಳನ್ನು ಈ ಕೆಳಕಂಡಂತೆ ವಿಭಾಗಿಸಿಕೊಳ್ಳಲಾಗಿದೆ. ಸೆಮಿಸ್ಟರ್ ಕೊನೆಯಲ್ಲಿನ ಲಿಖಿತ ಪರೀಕ್ಷೆ 40 ಅಂಕಗಳು, Formative Assessment ಹಾಗೂ Summative Assessment ಸೇರಿ ಒಟ್ಟು 50 ಅಂಕಗಳು.

| ಕ್ರಮ ಸಂಖ್ಯೆ | ಮಾನದಂಡಗಳು | ಅಂಕಗಳು |
|---|---|---|
| 1 | ಪರೀಕ್ಷೆಗಳ ಮೂಲಕ ಆಂತರಿಕ ಮೌಲ್ಯಮಾಪನ | 05 |
| 2 | ನಿಯೋಜಿತ ಕಾರ್ಯ ( ಎಫ್ ಎ) | 05 |
| | ಒಟ್ಟು(1+2) | 10 |
| | ಸೆಮಿಸ್ಟರ್ ಅಂತ್ಯದ ಪರೀಕ್ಷೆ (ಎಸ್ ಎ) | 40 |
| | ಒಟ್ಟು ( ಎಫ್ ಎ+ ಎಸ್ ಎ) | 50 |

# ಆಯ್ಕೆ ಪತ್ರಿಕೆ- ಮೂರನೇ ಸೆಮಿಸ್ಟರ್
# ಆಯ್ಕೆಸಂಪದ-1 : ಕನ್ನಡ ಜನಪದ ಕಲೆಗಳು
# ಎಸ್.ಇ.ಪಿ ಪಠ್ಯಕ್ರಮ

| ಚಾಲ್ತಿಗೆ ಬಂದ ವರ್ಷ: 2025-26 | ಮುಕ್ತ ಸಂಪದ-1:ಒಟ್ಟು ಉಪನ್ಯಾಸದ ಅವಧಿ: 30/32ಗಂಟೆಗಳು |
|---|---|
| ಒಟ್ಟು ಕ್ರೆಡಿಟ್ಸ್: 02 | ಒಂದು ವಾರಕ್ಕೆ ಒಟ್ಟು ಬೋಧನಾ ಅವಧಿ: 02 ಗಂಟೆಗಳು |

| ಕ್ರ.ಸಂ | ಪಠ್ಯ | ಬೋಧನಾ ಅವಧಿ : 32 | ಅಂಕಗಳು : 40 |
|---|---|---|---|
| 1 | ಕನ್ನಡ ಜನಪದ ಕಲೆಗಳ ಪ್ರಾಚೀನತೆ;<br>ಆರಾಧನೆ ಮತ್ತು ಮೇಳಗಳ ಸಂಬಂಧ | 3 | 5 |
| 2 | ಆರಾಧನೆಯ ಮೇಳಗಳು: ವಿವರಣೆ<br>ಅ.ಮೇಳಗಳು ಮತ್ತು ಜನಪದ ಸಂಸ್ಕೃತಿಯ ಸಂಬಂಧ<br>ಆ. ಕರಪಾಲ ಮೇಳ<br>ಇ. ಲಾವಣಿ ಸಂಪ್ರದಾಯ | 7 | 10 |
| 3 | ಬುಡಕಟ್ಟು ಮತ್ತು ಕಲೆಗಳು<br>ಅ. ಬುಡಕಟ್ಟು ಜೀವನ ವಿಧಾನ ಮತ್ತು ಕಲೆಗಳ ಸಂಬಂಧ<br>ಆ. ಕೊಡವರ ಹುತ್ತರಿ ಕೋಲಾಟ,<br>ಹುತ್ತರಿ ಕೋಲಾಟದ ಬಗೆಗಳು<br>ಇ. ಕೊರಗರ ಕುಣಿತ | 10 | 10 |
| 4 | ಜನಪದ ರಂಗಭೂಮಿ<br>ಅ. ಭೌಗೋಳಿಕ ಪ್ರದೇಶಗಳು ರಂಗಭೂಮಿಯ ಮೇಲೆ ಬೀರಿರುವ ಪ್ರಭಾವ: ಘಟ್ಟಪ್ರದೇಶ, ಕರಾವಳಿ, ಬಯಲುಸೀಮೆ.<br>ಈ ಮೇಲಿನ ಪ್ರದೇಶಗಳ ರಂಗಭೂಮಿಗಳ ಬಗೆಗಳು<br>ಆ. ಹಗರಣ<br>ಇ. ಬಯಲಾಟ- ಬಗೆಗಳು<br>ಯಕ್ಷಗಾನ- ಬಗೆಗಳು: ತೆಂಕುತಿಟ್ಟು, ಬಡಗುತಿಟ್ಟು, ತಾಳಮದ್ದಲೆ<br>ಈ. ಸೂತ್ರದ ಗೊಂಬೆಯಾಟ<br>ಉ. ತೊಗಲು ಗೊಂಬೆಯಾಟ | 12 | 15 |

# ಮಾದರಿ ಪ್ರಶ್ನೆ ಪತ್ರಿಕೆ

**ಅವಧಿ: 1.30 ಗಂಟೆಗಳು** **ಅಂಕಗಳು: 50**

I ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಐದು ಪ್ರಶ್ನೆಗಳಿಗೆ ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ: 2X5=10

(ಒಟ್ಟು 8 ಪ್ರಶ್ನೆಗಳನ್ನು ಕೊಡಬೇಕು)

II ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎಂಟರಿಂದ ಹತ್ತು ವಾಕ್ಯಗಳಲ್ಲಿ ಉತ್ತರಿಸಿ: 4X5=20

(ಒಟ್ಟು 6 ಪ್ರಶ್ನೆಗಳನ್ನು ಕೊಡಬೇಕು)

III ಈ ಕೆಳಗಿನ ಪ್ರಶ್ನೆಗಳಲ್ಲಿ ಯಾವುದಾದರೂ ಒಂದು ಪ್ರಶ್ನೆಗೆ ಹನ್ನೆರಡರಿಂದ ಹದಿನೈದು ವಾಕ್ಯಗಳಲ್ಲಿ ಉತ್ತರಿಸಿ: 10X1=10

(ಒಟ್ಟು 3 ಪ್ರಶ್ನೆಗಳನ್ನು ಕೊಡಬೇಕು)